**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/46/ಚುನಾವಣೆ/ಅ.ಸೂ/2013-14

3ನೇ ಮಹಡಿ, ಶಾಂತಿನಗರ ಟಿ.ಟಿ.ಎಂ.ಸಿ. 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು 560 027
ದಿನಾಂಕ:21.05.2014

ಗೆ,

ಪ್ರಾದೇಶಿಕ ಆಯುಕ್ತರು
(Regional Commissioners)
ಬೆಂಗಳೂರು ವಿಭಾಗ /ಮೈಸೂರು ವಿಭಾಗ
ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು (ಅಪೆಕ್ಸ್ ಸಂಘಗಳು)

ಮಾನ್ಯರೇ,

ವಿಷಯ:- ಆಯೋಗದ ಸಮ ಸಂಖ್ಯೆ ಅಧಿಸೂಚನೆ ದಿನಾಂಕ:16.01.2014 –ಇದಕ್ಕೆ ಸಂಬಂಧಿಸಿದ ಚೆಕ್‌ಲಿಸ್ಟ್‌ನಲ್ಲಿ ಕ್ರಸಂ 1 ರಿಂದ 04 ರವರೆಗಿನ ಅಂಶಗಳಿಗೆ ತಿದ್ದುಪಡಿ ಮಾಡುವ ಕುರಿತು.

ಉಲ್ಲೇಖ:- 1) ಆಯೋಗವು ಹೊರಡಿಸಿರುವ ಸಮಸಂಖ್ಯೆಯ ಪರಿಷ್ಕೃತ ಅಧಿಸೂಚನೆ ದಿನಾಂಕ:20.05.2014

2) ಆಯೋಗದ ಆದೇಶ ಸಂಖ್ಯೆ:ಸಚುಆ/ಚುನಾವಣೆ/ಜಿಚುಅ/ಅಪೆಕ್ಸ್/ 50/2013-14 ದಿನಾಂಕ: 13.02.2014 ಅಪೆಕ್ಸ್ ಸಂಘಗಳಿಗೆ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ

***

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಗೌರವ ಉಚ್ಚನ್ಯಾಯಾಲಯದ ಪೂರ್ಣ ಪೀಠವು ರಿಟ್ ಅಪೀಲು ಸಂಖ್ಯೆ:734/2014 ಮತ್ತು ಇತರ ಸಂಬಂಧಿತ ಅಪೀಲುಗಳ ಸಂಬಂಧ ದಿನಾಂಕ:30.04.2014 ರಂದು ನೀಡಿದ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಆಯೋಗವು ಅಪೆಕ್ಸ್ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಸಂಬಂಧ ಉಲ್ಲೇಖ (1) ರಲ್ಲಿ ಕಾಣಿಸಿರುವಂತೆ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಿರುತ್ತದೆ.

ಈ ರೀತಿ ಹೊರಡಿಸಲಾದ ಪರಿಷ್ಕೃತ ಅಧಿಸೂಚನೆಯಂತೆ ಕೆಲವು ವರ್ಗಗಳ ಅಪೆಕ್ಸ್ ಸಂಘಗಳ ಚುನಾವಣಾ ದಿನಾಂಕಗಳು ಬದಲಾದ ಹಿನ್ನೆಲೆಯಲ್ಲಿ ದಿನಾಂಕ:16.01.2014ರ ಸಮ ಸಂಖ್ಯೆ ಅಧಿಸೂಚನೆ ಸಂಬಂಧ ನೀಡಿದ್ದ ಚೆಕ್‌ಲಿಸ್ಟ್ ಕ್ರಮ ಸಂಖ್ಯೆ 01 ರಿಂದ 04ರ ವರೆಗಿನ ಅಂಶಗಳಿಗೆ ತಿದ್ದುಪಡಿ ಮಾಡುವ ಅಗತ್ಯತೆ ಕಂಡು ಬಂದಿದ್ದು, ಈ ಕೆಳಕಂಡಂತೆ ತಿದ್ದುಪಡಿಗಳನ್ನು ಮಾಡಿದ್ದು ಅದನ್ನು ಗಮನಿಸಿ ಕ್ರಮವಿಡಲು ತಿಳಿಸಿದೆ.

ದಿನಾಂಕ:16.01.2014 ಸಹಕಾರ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:ಸಚುಆ/46/ ಚುನಾವಣೆ/ಅ.ಸೂ/2013-14 ದಿನಾಂಕ:31.03.2014ರ ಅಂತ್ಯಕ್ಕೆ ಅವಧಿ ಮುಗಿಯಲಿರುವ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ನಡೆಸುವಿಕೆ –ಹಂತ ಹಂತವಾಗಿ ಜಿಲ್ಲಾ ಚುನಾವಣಾಧಿಕಾರಿಯು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ಹಾಗೂ ನಿಯಮಗಳ ಅನುಸಾರವಾಗಿ ಕ್ರಮವಿಡುವ ಬಗ್ಗೆ ಹೊರಡಿಸಲಾದ ಚೆಕ್‌ಲಿಸ್ಟ್‌ಗೆ, ಮೇಲ್ಕಂಡ ಸಮ ಸಂಖ್ಯೆ ಅಧಿಸೂಚನೆಗೆ ಗೌರವ ಉಚ್ಚನ್ಯಾಯಾಲಯವು ರಿಟ್ ಮೇಲ್ಮನವಿ ಸಂಖ್ಯೆ:734/2014 ಇತರ ಸಂಬಂಧಿತ ಮೇಲ್ಮನವಿಗಳಲ್ಲಿ ದಿನಾಂಕ: 30.04.2014 ರಂದು ನೀಡಿರುವ ಆದೇಶವನ್ನು ಗಮನದಲ್ಲಿಟ್ಟುಕೊಂಡು ದಿನಾಂಕ:20.05.2014 ರಂದು ಹೊರಡಿಸಲಾದ ಪರಿಷ್ಕೃತ ಅಧಿಸೂಚನೆಯಂತೆ ಈಗಾಗಲೇ ಹೊರಡಿಸಿದ್ದ ಚೆಕ್‌ಲಿಸ್ಟ್‌ನ ಕೆಲವು ಅಂಶಗಳಿಗೆ (ಕ್ರ.ಸಂ 01 ರಿಂದ 04 ರವರೆಗಿನ ಅಂಶಗಳು) ತಿದ್ದುಪಡಿ ಸೂಚಿಸಿರುವುದನ್ನು ಅಳವಡಿಸಿಕೊಳ್ಳುವುದು.

---2

| ಕ್ರ.ಸಂ | ವಿವರ | ಷರಾ |
| --- | --- | --- |
| 1 | ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆಗಳನ್ನು ನಡೆಸುವ ಸಂಬಂಧ ದಿನಾಂಕ:20.05.2014 ರ ಪರಿಷ್ಕೃತ ಅಧಿಸೂಚನೆ ಯಂತೆ ಚುನಾವಣಾ ದಿನಾಂಕಗಳನ್ನು ನಿಗಧಿ ಪಡಿಸಿರುವುದು. | |
| ಅ) | 1) ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಲ ನಿ., ಬೆಂಗಳೂರು<br>2) ಕರ್ನಾಟಕ ರಾಜ್ಯ ಸಹಕಾರಿ ಎಣ್ಣೆ ಬೀಜ ಬೆಳೆಗಾರರ ಮಹಾಮಂಡಲ ನಿ., ಬೆಂಗಳೂರು | ದಿನಾಂಕ:06.09.2014 ರಿಂದ 08.09.2014 ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸುವ ಯಾವುದೇ ದಿನಾಂಕ ಚುನಾವಣೆ ನಿಗಧಿಪಡಿಸತಕ್ಕದ್ದು. |
| ಆ) | 1) ಕರ್ನಾಟಕ ರಾಜ್ಯ ಸಹಕಾರಿ ವಸತಿ ಮಹಾಮಂಡಲ ನಿ., ಬೆಂಗಳೂರು<br>2) ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಲ ನಿ., ಬೆಂಗಳೂರು<br>3) ಕರ್ನಾಟಕ ರಾಜ್ಯ ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಲ ನಿ., ಬೆಂಗಳೂರು<br>4) ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಲ ನಿ., ಬೆಂಗಳೂರು<br>5) ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಲ ನಿ., ಬೆಂಗಳೂರು (ಕಾವೇರಿ ಹ್ಯಾಂಡ್‌ಲೂಮ್ಸ್) | ದಿನಾಂಕ:19.07.2014 ರಿಂದ 21.07.2014ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 2 | ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ, ಸುಸ್ತಿದಾರರ ಕರಡುಪಟ್ಟಿ, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್ಸ್‌ಗಳ ಕರಡು ಪಟ್ಟಿಯನ್ನು ದಾಖಲಾತಿಗಳ ಸಹಿತ ಸಂಬಂಧಿಸಿದ ಅಪೆಕ್ಸ್ ಸಂಘಗಳ ಮುಖ್ಯ ಕಾರ್ಯನಿರ್ವಾಹಕರು, ಜಿಲ್ಲಾ ಚುನಾವಣಾಧಿ ಕಾರಿಗೆ ಸಲ್ಲಿಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 13ಡಿ (4) ಮತ್ತು (5) ಗಳ ಅವಕಾಶದಂತೆ ಸಂಬಂಧಿಸಿದ ಮಹಾಮಂಡಲದ ಮುಖ್ಯ ಕಾರ್ಯನಿರ್ವಾಹ ಕರು ಕ್ರಮವಿಡತಕ್ಕದ್ದು. |
| 3 | ಕಂಡಿಕೆ (2) ರಲ್ಲಿ ನಮೂದಿಸಿರುವಂತೆ ಕರಡು ಮತದಾರರ ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡುಪಟ್ಟಿಗಳನ್ನು, ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಪಟ್ಟಿಯ ಸಂಬಂಧ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಚುನಾವಣೆ ದಿನಾಂಕಕ್ಕೆ ಪೂರ್ವದ ಕನಿಷ್ಠ 45 ದಿನಗಳ ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಯು (ಡಿ.ಇ.ಓ) ಪ್ರಕಟಿಸಬೇಕಾಗಿರುತ್ತದೆ. | ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ (3) (ಎ) ಅವಕಾಶದಂತೆ ಡಿ.ಇ.ಓ ಅಗತ್ಯ ಕ್ರಮವಿಡತಕ್ಕದ್ದು. |

---3

| | | |
|---|---|---|
| 4 | ಅಂತಿಮ ಅರ್ಹಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸುವಿಕೆ | ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ (3) (ಬಿ) ಅವಕಾಶದಂತೆ ಅಗತ್ಯ ಕ್ರಮವಿಡ ತಕ್ಕದ್ದು. |

ಮೇಲೆ ವಿವರಿಸಿದಂತೆ ಚೆಕ್‌ಲಿಸ್ಟ್‌ನ ಕ್ರ.ಸಂ 01 ರಿಂದ 04ರವರೆಗಿನ ಅಂಶಗಳನ್ನು ಮಾತ್ರ ತಿದ್ದುಪಡಿ ಮಾಡಲಾಗಿದೆ. ಉಳಿದಂತೆ ಚೆಕ್‌ಲಿಸ್ಟ್‌ನ ಕ್ರ.ಸಂ 05 ರಿಂದ 15ರ ವರೆಗಿನ ಅಂಶಗಳು ಈಗಾಗಲೇ ನೀಡಿರುವ ಚೆಕ್‌ಲಿಸ್ಟ್‌ನಂತೆ ಮುಂದುವರೆಯುತ್ತದೆ ಯಾದ ಕಾರಣ ಅದರಂತೆ ಕ್ರಮವಿಡತಕ್ಕದ್ದು.

ತಮ್ಮ ನಂಬುಗೆಯ

ಕರಡು ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ.

(ಬಿ.ಹೆಚ್. ಮಂಜಪ್ಪ)
**ಕಾರ್ಯದರ್ಶಿ**
**ಸಹಕಾರ ಚುನಾವಣಾ ಆಯೋಗ**
**ಬೆಂಗಳೂರು**

**ಪ್ರತಿಗಳು:-**

1) ಶ್ರೀ ಟಿ. ವೆಂಕಟೇಶ್, ಹೆಚ್ಚುವರಿ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ ಬೆಂಗಳೂರು ಹಾಗೂ ಸಹಾಯಕ ಜಿಲ್ಲಾ ಚುನಾವಣಾಧಿಕಾರಿ (ಅಪೆಕ್ಸ್ ಸಂಘಗಳು) ಬೆಂಗಳೂರು.
2) ಶ್ರೀ ಓಂ. ಪ್ರಕಾಶ್ ಬಿ.ಆರ್. ಸಹಕಾರ ಸಂಘಗಳ ಅಪರ ನಿಬಂಧಕರು, (ಕೈಗಾರಿಕೆ ಮತ್ತು ಹೈನುಗಾರಿಕೆ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560052
3) ಹೆಚ್ಚುವರಿ ಪ್ರಾದೇಶಿಕ ಆಯುಕ್ತರು, (ಭೂ ನಿರ್ವಹಣೆ ಯೋಜನೆಗಳು ಹಾಗೂ ಇತರೆ) ಪ್ರಾದೇಶಿಕ ಆಯುಕ್ತರ ಕಛೇರಿ, ಮೈಸೂರು ಹಾಗೂ ಸಹಾಯಕ ಜಿಲ್ಲಾ ಚುನಾವಣಾಧಿಕಾರಿ, (ಅಪೆಕ್ಸ್ ಸಂಘಗಳು)
4) ಸಹಕಾರ ಸಂಘಗಳ ಉಪ ನಿಬಂಧಕರು, ಮೈಸೂರು ಜಿಲ್ಲೆ, ಮೈಸೂರು ಹಾಗೂ ಸಹಾಯಕ ಜಿಲ್ಲಾ ಚುನಾವಣಾಧಿಕಾರಿ, (ಅಪೆಕ್ಸ್ ಸಂಘಗಳು) ಮೈಸೂರು.
5) ಕಛೇರಿ ಆದೇಶ /ರಕ್ಷಾ ಕಡತ